ನಿವಾರಿಸುವ ರೀತಿಗಳನ್ನು ಹೇಳಿಕೊಟ್ಟ. ಏಕಕಾಲಕ್ಕೆ ಒಬ್ಬ ಸಮರ್ಥ ಶಿಕ್ಷಕ, ವಿಶಿಷ್ಟ ಕಾವ್ಯವಾಚಕ, ಕವಿ, ಲೇಖಕ, ವಿಮರ್ಶಕ, ಭಾಷಾತಜ್ಞ, ಕಳಕಳಿಯ ಪೋಷಕನ ಪಾತ್ರ ವಹಿಸಿದ್ದ. ಇಂಥ ವ್ಯಾಖ್ಯಾನಗಳನ್ನು ರೆಕಾರ್ಡ್ ಮಾಡಿಕೊಳ್ಳುವ ಪರಿಪಾಟಿ ಆಗ ಇರಲಿಲ್ಲ, ಇದ್ದಿದ್ದರೆ, ಈಗಲೂ ಅರ್ಥಪೂರ್ಣವಾಗಿರುವಂಥ ನಾಡಿಗನ ವಿಚಾರಗಳನ್ನು, ಮುದ್ರಿಸಿ, ಕೇಳಿಸಿ ಸಾಹಿತ್ಯಾಸಕ್ತರಿಗೆ ತಲುಪಿಸಬಹುದಾಗಿತ್ತು.

* * *

ನಾಡಿಗನಿಗೆ ಮೊದಲಿನಿಂದಲೂ ಮದ್ಯಸೇವನೆಯ ಅಭ್ಯಾಸವಿತ್ತು. ಗೋವೆಗೆ ಬಂದ ನಂತರ ಅದು ಸ್ಥಳೀಯ ಪಾನಗಳನ್ನು ಸೇವಿಸಿ ಊಟ ಮಾಡುವ, ಅಲ್ಲಿಯ ಜನರೊಂದಿಗೆ ಹೊಂದಿಕೊಳ್ಳುವ ಸಾಮಾಜಿಕ ವಿಧಾನವೆನಿಸಿತ್ತು. ವಿದೇಶಕ್ಕೆ ಹೋದ ನಂತರ ಅಲ್ಲಿಯ ವಿವಿಧ ರುಚಿಗಳನ್ನೂ ಬಲ್ಲವನಾಗಿದ್ದ. ಏನೇ ಆದರೂ ಎಷ್ಟು ಕುಡಿದರೂ ಎಂದೂ ತನ್ನ ಆರೋಗ್ಯದ ಮಿತಿ, ಸ್ಥಿಮಿತತೆಯನ್ನು ಮೀರುತ್ತಿರಲಿಲ್ಲ. ನಮ್ಮಲ್ಲಿ ಬಂದಾಗಲೂ ತಾನೇ ಜೊತೆಗೆ ಮದ್ಯ ತಂದಿರುತ್ತಿದ್ದ ಅಥವಾ ಇಲ್ಲಿರುವ ಅಂಗಡಿಗಳಿಗೆ ಹೋಗಿ ಕೊಂಡು ತರುತ್ತಿದ್ದ. ತನ್ನ ಕುಡಿತಕ್ಕಾಗಿ ಅವನು ಸ್ವತಃ ವ್ಯಯಿಸುತ್ತಿದ್ದ, ಬೇರೆಯವರಿಗೆ ದುಂಬಾಲು ಬಿದ್ದು, ಕೊಡಿಸಿರಿ, ಕುಡಿಸಿರಿ ಎಂದು ಎಂದೂ ಬೇಡುತ್ತಿರಲಿಲ್ಲ. ನನಗೆ ಅವನ ಇಂಥ ಅಭ್ಯಾಸ/ದುರಭ್ಯಾಸಗಳ ಬಗ್ಗೆ ಮೊದಲಿನಿಂದಲೂ ಚಿಂತೆಯಿತ್ತು. ಅದು ಗೋವೆಯಲ್ಲಿದ್ದಾಗ ಅಭ್ಯಾಸವಾಗಿರುತ್ತಿದ್ದರೆ, ಬೇರೆ ನಾಡುಗಳಲ್ಲಿ ಅದನ್ನು ಹಾಗೆ ಕರೆಯಲಾಗುತ್ತಿರಲಿಲ್ಲ. ಮತ್ತು ನಾಡಿಗನಂಥ ಸಾಹಿತಿ, ಉಪದೇಶಕ, ಸ್ವತಃ ಹೋಮಿಯೋಪತಿ ಔಷಧ ನೀಡುತ್ತಿದ್ದ, ಪ್ರಚುರಪಡಿಸುತ್ತಿದ್ದ ವ್ಯಕ್ತಿಯಲ್ಲಿ ಈ ಚಟ ಖಂಡಿತವಾಗಿಯೂ ಸ್ವೀಕಾರಾರ್ಹವೆನಿಸುತ್ತಿರಲಿಲ್ಲ. ನನ್ನ ಪರಿಚಯದ ಅನೇಕ ಸಾಹಿತಿಗಳು ಕುಡಿಯುತ್ತಿದ್ದುದನ್ನು ನೋಡಿದ್ದೆ, ತಿಳಿದಿದ್ದೆ. ಆದರೆ, ಅವರು ಅದಕ್ಕೆ ಸೋತಿರಲಿಲ್ಲ. ನಾಡಿಗ ಕೊನೆಕೊನೆಗೆ ತನ್ನ ಮನೆಯಲ್ಲಿಯೇ ಅದನ್ನು ನಿಯಮದಂತೆ ಸೇವಿಸುವ ಮಟ್ಟಕ್ಕೆ ಬಂದಿದ್ದನೆನಿಸುತ್ತದೆ. ನನಗೆ ಆದ ಆಶ್ಚರ್ಯವೆಂದರೆ, ನಾನು ಸಾಮಾನ್ಯವಾಗಿ ಊಹಿಸುತ್ತಿದ್ದಂಥ ಯಾವ ಅಸಮಾಧಾನವಾಗಲಿ, ಮನೋವ್ಯಥೆಯಾಗಲಿ ಅವನಲ್ಲಿ, ಅವನ ಮನೆಯಲ್ಲಿ ಕಂಡಿರಲಿಲ್ಲ. ಅವನದು ಸಂತೋಷದ, ಸಮಾಧಾನದ, ಸಂತೃಪ್ತ ಕುಟುಂಬ. ಹೀಗಿದ್ದರೂ ಕುಡಿಯುತ್ತಿದ್ದುದು ನಿತ್ಯದ ಅರ್ಥರಹಿತ ಅಭ್ಯಾಸವಾಗಿತ್ತು, ಅಷ್ಟೆ. ಅವನ ಈ ಮದ್ಯಸೇವನೆಯ ಚಟವನ್ನು ಕುರಿತು, ಸ್ವತಃ ತಾವೇ ದಿನಾಲು ಕುಡಿಯುತ್ತಿದ್ದ ಸಾಹಿತಿ ಮಿತ್ರರು ಚೇಷ್ಟೆ, ಹಾಸ್ಯ, ವ್ಯಂಗ್ಯ ಮಾಡುತ್ತಿದ್ದುದು ಮಾತ್ರ ಮೋಜಿನ ಸಂಗತಿಯಾಗಿತ್ತು. ಕನ್ನಡ ಸಾಹಿತ್ಯ, ವಿಮರ್ಶಕರ ಲೋಕ ತನ್ನನ್ನು ಅಲಕ್ಷಿಸಿದೆ, ನಿರ್ಲಕ್ಷಿಸಿದೆ ಎಂಬ ಒಂದು ನೋವು ಮಾತ್ರ ಅವನನ್ನು ಪೀಡಿಸುತ್ತಿತ್ತು. ಅವನು ಹೇಳುತ್ತಿರಲಿಲ್ಲ, ಆದರೆ ಅದು ಸತ್ಯವಾಗಿತ್ತು. ಬಹುಶಃ ಈ ಒಳನೋವು ಅವನನ್ನು ಹಿಂಡಿ ಹಾಕಿತ್ತು.

'ದಾಂಪತ್ಯಗೀತ' ಬರೆದು, ತನ್ನ ವೈಯಕ್ತಿಕ ಸೋಲು ಗೆಲುವುಗಳನ್ನು ಮುಕ್ತವಾಗಿ ಹೇಳಿಕೊಂಡಿದ್ದ. ಬಹುಶಃ 'ನನ್ನ ನಲ್ಲ' ಬರೆದ ಮಧುರಚೆನ್ನರಿಗೆ, 'ಸಖೀಗೀತ' ರಚಿಸಿದ ಬೇಂದ್ರೆಯವರಿಗೆ ಆ ಕಾಲದಲ್ಲಿ ಇಂಥ ಮುಕ್ತತೆ ಸಾಧ್ಯವಾಗುತ್ತಿರಲಿಲ್ಲ. ಇಂಥ ವಿರಳ, ವಿಚಿತ್ರ, ಅಪರೂಪದ 'ದಾಂಪತ್ಯಗೀತ'ವನ್ನು ಮಾಲತಿಗೇ ಅರ್ಪಿಸಿ ಹಗುರಾಗಿದ್ದ. ಅವನ ಪ್ರಾಮಾಣಿಕತೆಯ ಪರಾಕಾಷ್ಠೆ ಅದರಲ್ಲಿತ್ತು. ಇದಾದ ನಂತರ 'ಪಂಚಭೂತಗಳು' ತಲೆಯಲ್ಲಿ ಹೊಕ್ಕವು. ಅವನ್ನು ಸಾಧಿಸುವ ಪೂರ್ವದಲ್ಲಿ ಬರವಣಿಗೆ ಮತ್ತು ಅಧ್ಯಯನಕ್ಕೆ ಪೂರ್ವಭಾವಿಯಾಗಿ 10–15 ವರ್ಷಗಳನ್ನು ಮುಡಿಪಾಗಿಟ್ಟ. ಈಗಾಗಲೇ ಐದಾರು ಭಾಷೆಗಳನ್ನು ಅರಿತಿದ್ದರೂ, ಕನ್ನಡ, ಇಂಗ್ಲಿಷಿನಲ್ಲಿ ಸಾಕಷ್ಟು ಸಂಸ್ಕೃತವನ್ನು ಓದಿಕೊಂಡಿದ್ದರೂ ಮೂಲ ಸಂಸ್ಕೃತವನ್ನು ಕಲಿಯುವ ಅಗತ್ಯ ಅವನನ್ನು ಕೊರೆಯತೊಡಗಿತು. ಸ್ವಲ್ಪ ಮಟ್ಟಿಗೆ ಸಂಸ್ಕೃತ ಲಿಪಿ, ಕನ್ನಡ ಲಿಪ್ಯಂತರಣದಲ್ಲಿ ಸಂಸ್ಕೃತವನ್ನು ಅಭ್ಯಸಿಸತೊಡಗಿದ. ಮೊದಲಿನಿಂದಲೂ ಸಂಸ್ಕೃತಿ, ಸಂಸ್ಕಾರ, ಸನಾತನಗಳನ್ನು ಇಷ್ಟಪಡುತ್ತಿದ್ದ, ಆಚರಿಸುತ್ತಿದ್ದ ಈ ಆಂಗ್ಲ, ಕನ್ನಡ ಸಾಹಿತಿ, ಪ್ರಾಧ್ಯಾಪಕ ಈಗ ಪೂರ್ಣಾವಧಿ ಸಂಸ್ಕೃತಿಪೋಷಕ ಚಿಂತಕನಾದ. ಅದರ ಫಲವಾಗಿ ಸುಂದರ, ಅದ್ಭುತ ಕಾವ್ಯ 'ಪಂಚಭೂತಗಳು' ಪ್ರಕಟಿಸಿದ. ನಂತರ ಬಂದ 'ಜಡ ಮತ್ತು ಚೇತನ' (2005) ಮತ್ತು 'ಏಕಾಂತ ಲೋಕಾಂತ' (2014) ಸಹ ಅವನ ಸಂಸ್ಕೃತಿ